ಗ್ರಮಗಳಲ್ಲಿ ಇಂದಿಗೂ ಸಹ ಸಮ್ಮ ಸಂದರ್ಭದಲ್ಲಿ ಹಾಜರಿದ್ದರು.

# ತಾಂತ್ರಿಕ ಕೌಶಲ ಪಡೆಯಲು ಸಲಹೆ

ಪ್ರಜಾವಾಣಿ ವಾರ್ತೆ

ಆನೇಕಲ್: ಪದವಿಗಳು ಕೇವಲ ಉದ್ಯೋಗಕ್ಕೆ ಅರ್ಹತಾ ಪತ್ರಗಳು ಮಾತ್ರ. ಉದ್ಯೋಗ ಪಡೆಯಲು ಔದ್ಯೋಗಿಕ ತಾಂತ್ರಿಕ ಕೌಶಲ ಹಾಗೂ ನವೀನ ತಂತ್ರಜ್ಞಾನದ ಅರಿವು ಮತ್ತು ಪರಿಸ್ಥಿತಿಯನ್ನು ನಿಭಾಯಿಸುವ ಸಾಮರ್ಥ್ಯವನ್ನು ಆಧರಿಸಿ ಉದ್ಯೋಗದಾತರು ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ ಎಂದು ಅಶೋಕ ಲೈಲ್ಯಾಂಡ್‌ನ ಸಹಾಯಕ ವ್ಯವಸ್ಥಾಪಕ ಎಸ್.ರವಿಚಂದ್ರನ್ ನುಡಿದರು.

ಅವರು ತಾಲ್ಲೂಕಿನ ಗುಡ್ಡನಹಳ್ಳಿ ಸಮೀಪದ ಶಿರಡಿಸಾಯಿ ತಾಂತ್ರಿಕ ವಿದ್ಯಾಲಯದಲ್ಲಿ ಪ್ರಥಮ ವರ್ಷದ ಬಿಇ ತರಗತಿಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಪ್ರತಿ ವರ್ಷ 10ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದವಿ ಪಡೆಯುತ್ತಾರೆ. ಆದರೆ, ಉದ್ಯೋಗ ಪಡೆಯುವ ಸಾಮರ್ಥ್ಯ ಇರುವವರ ಪ್ರಮಾಣ ಕಡಿಮೆ. ಹಾಗಾಗಿ ವಿದ್ಯಾರ್ಥಿಗಳು ಪಠ್ಯ ವಿಷಯಗಳ ಜೊತೆಗೆ ಪ್ರಾಯೋಗಿಕ ಜ್ಞಾನದ ಅರಿವನ್ನು ಹೊಂದಿರಬೇಕು. ಆಸಕ್ತಿ ವಹಿಸಿ ಅಧ್ಯಯನ ಮಾಡುವತ್ತಾ ಗಮನಹರಿಸಬೇಕು ಎಂದರು.




ಆನೇಕಲ್ ತಾಲ್ಲೂಕಿನ ಗುಡ್ಡನಹಳ್ಳಿ ಸಮೀಪದ ಶಿರಡಿಸಾಯಿ ತಾಂತ್ರಿಕ ವಿದ್ಯಾಲಯದಲ್ಲಿ ಪ್ರಥಮ ವರ್ಷದ ಬಿಇ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ (ಇಸಿಸಿ) ವಿಭಾಗದಲ್ಲಿ ಉನ್ನತ ಸಾಧನೆ ಮಾಡಿದ ವಿದ್ಯಾರ್ಥಿನಿ ಬಿಂದು ಅವರನ್ನು ಸನ್ಮಾನಿಸಲಾಯಿತು

ತಮಿಳುನಾಡಿನ ಸೇಲಂನ ವೃತ್ತಿ ಮಾರ್ಗದರ್ಶಕ ಹಾಗೂ ವಿಶ್ಲೇಷಕ ಜಯಪ್ರಕಾಶ್ ಗಾಂಧಿ ಮಾತನಾಡಿ ವಿಜ್ಞಾನ ಮತ್ತು ಗಣಿತದ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಲಭ್ಯ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಹಲವಾರು ಸಮಸ್ಯೆಗಳು ತಲೆದೋರುತ್ತಿವೆ. ಶಿಕ್ಷಣದ ಮೂಲಕ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ವಿಭಿನ್ನವಾಗಿ ಆಲೋಚಿಸುವ ಹಾಗೂ ತಾರ್ಕಿಕವಾಗಿ ಚಿಂತಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದರು.

ಸಾಯಿರಾಂ ಗ್ರೂಪ್ಸ್ ವಿದ್ಯಾಸಂಸ್ಥೆಗಳ ಸಿಇಓ ಸಾಯಿಪ್ರಕಾಶ್‌ಲಿಯೋ ಮುತ್ತು, ಕಾಲೇಜಿನ ಪ್ರಾಚಾರ್ಯ ಡಾ.ವೈ.ವಿಜಯ್‌ಕುಮಾರ್, ಉಪ ಪ್ರಾಚಾರ್ಯ ಡಾ.ಬಿ.ಷಡಾಕ್ಷರಪ್ಪ ಹಾಜರಿದ್ದರು.